# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 171 (164) |
| ಸದಸ್ಯರ ಹೆಸರು | : | ಶ್ರೀ. ಎಂ.ಎ ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 22.09.2020 |
| ಉತ್ತರಿಸುವವರು | : | ಗಣಿ ಮತ್ತು ಭೂವಿಜ್ಞಾನ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿರುವ ರಾಯಸಂದ್ರ ಕಾವಲು ಅಮೃತ್ ಮಹಲ್ ಗೆ ಸೇರಿದ ಎಷ್ಟು ಜಮೀನನ್ನು ಮೈಸೂರು ಮಿನರಲ್ಸ್ ಸಂಸ್ಥೆಯು ಗುತ್ತಿಗೆಗೆ ಪಡೆದಿದೆ; | ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಷನ್ ಲಿಮಿಟೆಡ್ ಸಂಸ್ಥೆಯು (ಹಿಂದಿನ ಮೈಸೂರು ಮಿನರಲ್ಸ್ ಲಿಮಿಟೆಡ್) ರಾಯಸಂದ್ರ ಕಾವಲು ಅಮೃತ್ ಮಹಾಲ್‌ಗೆ ಸೇರಿದ ಜಮೀನಿನಲ್ಲಿ 740 ಎಕರೆ (299.47 ಹೆಕ್ಟೇರ್) ಪ್ರದೇಶವನ್ನು ಸಂಸ್ಥೆಯು ಗುತ್ತಿಗೆಗೆ ಪಡೆದಿದೆ. |
| ಆ) | ಸದರಿ ಜಮೀನನ್ನು ಮೈಸೂರು ಮಿನರಲ್ಸ್ ಸಂಸ್ಥೆಯು ಯಾವಾಗ, ಯಾವ ಮಾರ್ಗಸೂಚಿಗಳನ್ವಯ ಮತ್ತು ಎಷ್ಟು ವರ್ಷಗಳಿಗೆ ಪಡೆದಿದೆ; (ಸರ್ಕಾರದ ಆದೇಶಗಳನ್ನು ನೀಡುವುದು) | ಸದರಿ ಜಮೀನನ್ನು ಮೈಸೂರು ಮಿನರಲ್ಸ್ ಸಂಸ್ಥೆಯು ದಿನಾಂಕ: 01.11.1976 ರಿಂದ 2020ರ ಅವಧಿಯಲ್ಲಿ ಒಟ್ಟು 45 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಪಡೆದಿರುತ್ತದೆ. (ಸರ್ಕಾರದ ಆದೇಶಗಳನ್ನು ಲಗತ್ತಿಸಿದೆ). |
| ಇ) | ಸದರಿ ಜಮೀನನ್ನು ಮೈಸೂರು ಮಿನರಲ್ಸ್ ಸಂಸ್ಥೆಯು ಪಡೆಯುವಾಗ ಪಶುಸಂಗೋಪನೆ ಇಲಾಖೆಯು ವಿಧಿಸಿರುವ ಷರತ್ತು ಮತ್ತು ನಿಬಂಧನೆಗಳೇನು; (ವಿವರ ನೀಡುವುದು). | ಸರ್ಕಾರದ ಆದೇಶದಂತೆ ಪಶುಸಂಗೋಪನೆ ಇಲಾಖೆಗೆ ಈ ಕೆಳಕಂಡಂತೆ ಷರತ್ತನ್ನು ವಿಧಿಸಿರುತ್ತದೆ.<br><br>1) ಮೇ\|\| ಮೈಸೂರು ಮಿನರಲ್ಸ್ ಲಿಮಿಟೆಡ್, ಬೆಂಗಳೂರು ಇವರು ಕಾವಲು ಪ್ರದೇಶವನ್ನು ಬಗರ್ ಹುಕುಂ ಸಾಗುವಳಿ ಮುಂತಾದುದಕ್ಕೆ ಅವಕಾಶ ಮಾಡದಂತೆ ಕಾಪಾಡಿಕೊಳ್ಳತಕ್ಕದ್ದು,<br>2) ಮೇ\|\| ಮೈಸೂರು ಮಿನರಲ್ಸ್ ಲಿಮಿಟೆಡ್, ಬೆಂಗಳೂರು ಇವರು ತಮ್ಮ ಸ್ವಂತ ವೆಚ್ಚದಲ್ಲಿ ಕಾವಲು ಜಮೀನನ್ನು ಅಳತೆ ಮಾಡಿಸಿ ಬೌಂಡರಿಯನ್ನು (ಚಕ್ಕುಬಂದಿ ನಿಗದಿಪಡಿಸತಕ್ಕದ್ದು)<br>3) ಗುತ್ತಿಗೆ ಅವಧಿ ಮುಗಿದ ಕೂಡಲೇ ಕಾವಲಿನಲ್ಲಿರುವ ಕಾಯಂ ಅಥವಾ ಹಂಗಾಮಿಯಾಗಿರುವ ಯಾವುದೇ ನಿರ್ಮಿತ ವ್ಯವಸ್ಥೆಗಳು ಪಶುಸಂಗೋಪನಾ ಇಲಾಖೆಯ ಸ್ವತ್ತಾಗಿರುತ್ತದೆ.<br>4) ನಿಗದಿಪಡಿಸಿದ ಗುತ್ತಿಗೆ ಹಣವನ್ನು ಪ್ರತಿ ವರ್ಷವೂ ಮುಂಚಿತವಾಗಿ ಪಾವತಿ ಮಾಡತಕ್ಕದ್ದು, |

| | | |
|---|---|---|
| | | ಮೇಲಿನ ಷರತ್ತಿನನ್ವಯ ಈ ಕೆಳಕಂಡಂತೆ, ವರ್ಷವಾರು ಗುತ್ತಿಗೆ ಹಣವನ್ನು ಪಾವತಿಸಲಾಗಿದೆ.<br><br>1. ದಿನಾಂಕ:01.11.1976 ರಿಂದ 31.10.1996ರ 20 ವರ್ಷಗಳ ಅವಧಿಗೆ ವಾರ್ಷಿಕ ರೂ. 25,000/-ಗಳಂತೆ<br>2. ದಿನಾಂಕ:01.11.1996 ರಿಂದ 31.10.2001ರ 05 ವರ್ಷಗಳ ಅವಧಿಗೆ ಒಟ್ಟು ರೂ. 25 ಲಕ್ಷ ಗಳಂತೆ<br>3. ದಿನಾಂಕ:2001 ರಿಂದ 2005ರವರೆಗೆ ಪ್ರತಿ ವರ್ಷ ರೂ. 7.5 ಲಕ್ಷಗಳಂತೆ<br>4. ದಿನಾಂಕ: 2006 ರಿಂದ 2020ರವೆಗೆ ಪ್ರತಿ ವರ್ಷ ರೂ. 10 ಲಕ್ಷಗಳಂತೆ ಗುತ್ತಿಗೆ ಹಣ ಪಾವತಿಸಲಾಗಿದೆ. |
| ಈ) | ಗುತ್ತಿಗೆ ಅವಧಿ ಮುಗಿದ ಮೇಲೆ ಗಣಿಗಾರಿಕೆಯಿಂದ ಈ ಜಮೀನಿನಲ್ಲಿ ಉಂಟಾಗಿರುವ ಗುಂಡಿ ಕೊರಕಲು ಪ್ರದೇಶಗಳನ್ನು ಸರಿಮಾಡಿಕೊಡಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ; (ವಿವರ ನೀಡುವುದು). | ಸರ್ಕಾರದ ಗಣಿಗುತ್ತಿಗೆ ಪ್ರದೇಶವನ್ನು ಸಂಖ್ಯೆ ಸಿಐ 80 ಸಿಎಂಸಿ 2016, ದಿನಾಂಕ:19.04.2017ರ ಪ್ರಕಾರ ರದ್ದುಪಡಿಸಿದ್ದು, ಸಂಸ್ಥೆಯು ಎಂಎಂಡಿಆರ್ 1957ರ ತಿದ್ದುಪಡಿ 2015ರ ನಿಯಮ 17(ಎ) 2 (ಎ) ರಡಿಯಲ್ಲಿ ಮಂಜೂರಾತಿಗಾಗಿ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತದೆ. ಗಣಿಗಾರಿಕೆ ಅವಧಿ ಮುಗಿದ ನಂತರ Indian Bureau of Mines ಅನುಮೋದಿತ Final Mine Closer Plan ರಂತೆ ಗುತ್ತಿಗೆ ಪ್ರದೇಶವನ್ನು Reclamation ಮಾಡಲು ಕ್ರಮವಹಿಸಲಾಗುವುದು. |
| ಉ) | ಸದರಿ ಜಮೀನಿನಲ್ಲಿ ಗಣಿಗಾರಿಕೆ ನಡೆಸುತ್ತಿರುವುದರಿಂದ ರಾಯಸಂದ್ರ ಕಾವಲಿನಲ್ಲಿ ತಳಿ ಸಂವರ್ದನೆ ಕಾರ್ಯಗಳನ್ನು ಕೈಗೊಳ್ಳಲು ಮತ್ತು ರಾಸುಗಳ ಬೆಳವಣಿಗೆಗೆ ಮತ್ತು ಇತರೆ ಪೂರಕ ಚಟುವಟಿಕೆಗಳಿಗೆ ತೊಂದರೆಗಳಾಗಿವೆಯೇ? (ವಿವರ ನೀಡುವುದು). | ಸದರಿ ಜಮೀನಿನಲ್ಲಿ ಗಣಿಗಾರಿಕೆಯಿಂದ ತಳಿಸಂವರ್ದನೆ ಕಾರ್ಯಗಳನ್ನು ಕೈಗೊಳ್ಳಲು ಮತ್ತು ರಾಸುಗಳ ಬೆಳವಣಿಗೆಗೆ ಮತ್ತು ಇತರೇ ಪೂರಕ ಚಟುವಟಿಕೆಗಳಿಗೆ ಇಲ್ಲಿಯವರೆವಿಗೆ ಯಾವುದೇ ತೊಂದರೆಗಳಾಗಿರುವುದಿಲ್ಲ. |

ಸಂಖ್ಯೆ: ಸಿಐ 84 ಸಿಎಂಸಿ 2020

(ಸಿ.ಸಿ. ಪಾಟೀಲ್)
ಗಣಿ ಮತ್ತು ಭೂವಿಜ್ಞಾನ ಸಚಿವರು

**ಸಿ.ಸಿ. ಪಾಟೀಲ**
**ಗಣಿ ಮತ್ತು ಭೂವಿಜ್ಞಾನ ಸಚಿವರು**

ANNEXURE-[illegible]

234

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ:— ಮೆ: ಮೈಸೂರು ಖನಿಜ ನಿಯಮಿತ ಬೆಂಗಳೂರು, ಇವರಿಗೆ ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕಿನ ರಾಂಪುರದ ಅಮೃತ ಮಹಲ ಕಾವಲಿನಲ್ಲಿರುವ ತಗಡೂರು ಮತ್ತು ಬಿಕ್ಕನಹಳ್ಳಿಯಲ್ಲಿ 740 ಎಕರೆ ಜಮೀನನ್ನು ಕ್ರೋಮೈಟ್ ಗಣಿಗಾಗಿ ಗುತ್ತಿಗೆಗೆ ಕೊಡಲು ಆದೇಶ ನೀಡಿಕೆ.

—o—

ಆದೇಶ ಸಂಖ್ಯೆ: ಪಸಂಮೀಪ್ರ: 18: ಎಎಲ್‌ಎಸ್: 87, ಬೆಂಗಳೂರು, ದಿನಾಂಕ: 28ನೇ ಸೆಪ್ಟೆಂಬರ್ 1988.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಎಎಫ್: 34: ಎಎಲ್‌ಎಸ್: 85, ದಿನಾಂಕ: 18—9—86.

2) ನಿರ್ದೇಶಕರು, ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ಅವರೊಡನೆ ವ್ಯವಹರಿಸಲಾದ ಅಂತಿಮ ಪತ್ರ ಸಂಖ್ಯೆ: ಪಲೆಮೀಪ್ರ: ಎಎಲ್‌ಎಸ್: 76: ಎಎ—4: 86—87, ದಿನಾಂಕ: 1—1—88.

ಪ್ರಸ್ತಾವನೆ:

ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆಯ ಅಧೀನದಲ್ಲಿರುವ ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕು ರಾಂಪುರದ ಅಮೃತ ಮಹಲ ಕಾವಲು ಭೂಮಿಯ ತಗಡೂರು ಮತ್ತು ಬಿಕ್ಕನಹಳ್ಳಿಯ 1406 ಎಕರೆ 34 ಗುಂಟೆ ಜಮೀನನ್ನು ಕ್ರೋಮೈಟ್ ಗಣಿಗಾಗಿ ಮೆ: ಮೈಸೂರು ಖನಿಜ ನಿಯಮಿತ, ಬೆಂಗಳೂರು ಇವರಿಗೆ ಕೆಲವು ಷರತ್ತುಗಳೊಡನೆ ಉಲ್ಲೇಖ(1)ರಲ್ಲಿ ಓದಲಾಗಿರುವ ಸರ್ಕಾರದ ಆದೇಶದಲ್ಲಿ 20 ವರ್ಷ ಕಾಲಾವಧಿಗೆ ಗುತ್ತಿಗೆಗೆ ಕೊಡಲಾಗಿತ್ತು. ಮೆ: ಮೈಸೂರು ಖನಿಜ ನಿಯಮಿತ, ಬೆಂಗಳೂರು ಇವರು ಕ್ರೋಮೈಟ್ ಇರುವ ಪ್ರದೇಶವನ್ನು ಮಾತ್ರ ಗುರುತಿಸಿ 1406 ಎಕರೆ, 34 ಗುಂಟೆ ಭೂಮಿಯಲ್ಲಿ ಕೇವಲ 740 ಎಕರೆ ಪ್ರದೇಶವನ್ನು ಮಾತ್ರ ಉಪಯೋಗಿಸಿಕೊಳ್ಳಲು ಕೇಳಿರುವುದರಿಂದ ಸರ್ಕಾರದ ಆದೇಶ ಸಂಖ್ಯೆ: ಎಎಫ್: 34: ಎಎಲ್‌ಎಸ್: 85, ದಿನಾಂಕ: 18—9—86ರಲ್ಲಿ ವಿಧಿಸಿರುವ ಷರತ್ತುಗಳೊಡನೆ 1406 ಎಕರೆ 34 ಗುಂಟೆಗೆ ಬದಲಾಗಿ 740 ಎಕರೆ ಭೂಮಿಯನ್ನು ಮಾತ್ರ ಮೆ: ಮೈಸೂರು ಖನಿಜ ನಿಯಮಿತ ಬೆಂಗಳೂರು ಇವರಿಗೆ ಗುತ್ತಿಗೆಗೆ ಕೊಡಬಹುದೆಂದು ಉಲ್ಲೇಖ(2)ರಲ್ಲಿ ಓದಲಾಗಿರುವ ಪತ್ರದಲ್ಲಿ ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆ ನಿರ್ದೇಶಕರು ಶಿಫಾರಸು ಮಾಡಿರುತ್ತಾರೆ.

ಆ ದೇ ಶ

ಸರ್ಕಾರದ ಆದೇಶ ಸಂಖ್ಯೆ: ಎಎಫ್: 34: ಎಎಲ್‌ಎಸ್: 85, ದಿನಾಂಕ: 18—9-86ನ್ನು ಶಿಥಿಲಗೊಳಿಸುತ್ತಾ ಈ ಕೆಳಕಂಡ ಮಾರ್ಪಾಡು ಮತ್ತು ಷರತ್ತುಗಳ ಮೇರೆಗೆ ಪಶುಪಾಲನೆ ಇಲಾಖೆಯ ಅಧೀನದಲ್ಲಿರುವ ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕು ರಾಂಪುರದ ಅಮೃತ ಮಹಲ ಕಾವಲಿನ ತಗಡೂರು ಮತ್ತು ಬಿಕ್ಕನಹಳ್ಳಿಯಲ್ಲಿನ ಸರ್ವೆ ನಂ.1ರಲ್ಲಿನ 740 ಎಕರೆ (ಏಳು ನೂರ ನಲವತ್ತು) ಜಮೀನನ್ನು ಮೈಸೂರು ಖನಿಜ ನಿಯಮಿತ, ಬೆಂಗಳೂರು ಇವರಿಗೆ ಕ್ರೋಮೈಟ್ ಗಣಿಗಾಗಿ ಗುತ್ತಿಗೆ ಕೊಡಲು ಸರ್ಕಾರ ಒಪ್ಪಿಗೆ ನೀಡಿದೆ.

(ಅ) ಗುತ್ತಿಗೆ ಅವಧಿ ಕಾಲಾವಧಿ 1—11—76 ರಿಂದ 31—10—96ರ ವರೆಗೆ 20 ವರ್ಷಗಳು (ಕಾಲವನ್ನು ನಿಗದಿ ಮಾಡಲಾಗಿದೆ).

(ಆ) ಮೆ: ಮೈಸೂರು ಖನಿಜ ನಿಯಮಿತ ಇವರು ಮೇಲ್ಕಂಡ ಕಾವಲು ಪ್ರದೇಶವನ್ನು ಬೇರೆ ಯಾರೂ ಸಾಗುವಳಿ ಮಾಡುವುದಕ್ಕೆ ಅವಕಾಶ ಕೊಡದಂತೆ ಕಾಪಾಡಿಕೊಳ್ಳಬೇಕು.

(ಇ) ಮೆ: ಮೈಸೂರು ಖನಿಜ ನಿಯಮಿತ ಇವರೇ ತಮ್ಮ ಸ್ವಂತ ವೆಚ್ಚದಲ್ಲಿ ಕಾವಲು ಜಮೀನನ್ನು ಅಳತೆ ಮಾಡಿಸಿ ಹದ್ದುಬಸ್ತುಗಳನ್ನು (ಸರ್ವೆಕಲ್ಲು) ನಿಗದಿ ಮಾಡತಕ್ಕದ್ದು:

... 2 ...

(ಈ) 20 ವರ್ಷಗಳ ಅವಧಿ 1-11-76 ರಿಂದ 31-10-1996ರ ವರೆಗೆ ಗುತ್ತಿಗೆ ಅವಧಿ ಮುಗಿದೊಡನೆ ಕಾವಲಿನಲ್ಲಿರುವ ಖನಿಜವು ಅಥವಾ ಸಂಗ್ರಹವಾಗಿರುವ ಯಾವುದೇ ನಿರ್ಮಿತ ವ್ಯವಸ್ಥೆಗಳು ಪಶುಸಂಗೋಪನಾ ಇಲಾಖೆಯ ಸ್ವತ್ತಾಗುತ್ತದೆ:

(ಉ) ವರ್ಷಕ್ಕೆ 25,000-00 ರೂ.ಗಳಂತೆ ಪ್ರತಿ ವರ್ಷ ಗುತ್ತಿಗೆ ಹಣವನ್ನು ಪಶುಸಂಗೋಪನಾ ಇಲಾಖೆಗೆ ದಿನಾಂಕ: 1-11-76 ರಿಂದ ಮೈಸೂರು ಖನಿಜ ಪರಿಮಿತ ರವರು ತಪ್ಪದೆ ಪಾವತಿ ಮಾಡಬೇಕು:

(ಊ) 5 ವರ್ಷಕ್ಕೊಮ್ಮೆ ಮೇಲೆ ಕಾಣಿಸಿದ ಷರತ್ತುಗಳನ್ನು ಪುನರ್ ಪರಿಶೀಲಿಸಿ ಷರತ್ತುಗಳಲ್ಲಿ ಏನಾದರೂ ಮಾರ್ಪಾಡು (ಬದಲಾವಣೆ) ಮಾಡುವುದಾದರೆ ಸರ್ಕಾರದೊಡನೆ ಚರ್ಚಿಸಿ ಬೇಕಾದ ಮಾರ್ಪಾಡನ್ನು ಮಾಡಬಹುದು.

(ಋ) ಮೇಲೆ ಕಾಣಿಸಿದ ಯಾವುದೇ ಷರತ್ತುಗಳಲ್ಲಿ ('ಅ' ಇಂದ 'ಋ' ವರೆಗೆ) ಉಲ್ಲಂಘನೆಯಾದ ಪಕ್ಷದಲ್ಲಿ ಗುತ್ತಿಗೆಗೆ ಕೊಟ್ಟಿರುವ ಜಮೀನನ್ನು ಹಿಂದಕ್ಕೆ ತೆಗೆದುಕೊಳ್ಳಲು ಸರ್ಕಾರಕ್ಕೆ ಅಧಿಕಾರವಿದೆ.

(ೠ) ಹಿರಿಯ ಸಹಾಯಕ ನಿರ್ದೇಶಕರು, ಪಶು ಸಂವರ್ಧನಾ ಕೇಂದ್ರ, ಅಜ್ಜಂಪುರ ಇವರು (ಅವರ ಅಧೀನದಲ್ಲಿರುವ ಅಧಿಕಾರಿಯನ್ನು ನೇಮಿಸಿ) ನೇಮಿಸಿದ ಅಧಿಕಾರಿಯವರ ಸಮಕ್ಷಮದಲ್ಲಿ ಮೇಲ್ಕಂಡ ಜಮೀನನ್ನು ಅಳತೆ ಮಾಡಿಸಿ ವರದಿಯನ್ನು ಕಳುಹಿಸುವಂತೆ ಸೂಚಿಸುವುದು.

ಈ ಆದೇಶವನ್ನು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಸಿಐ:150 ಎಂಎಂಎಂ:81 , ದಿನಾಂಕ: 24-9-1986 ಹಾಗೂ ಆರ್ಥಿಕ ಇಲಾಖೆ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ:133 :ವೆಚ್ಚ-4: 88 : , ದಿನಾಂಕ: 11-2-88 ರ ಸಮ್ಮತಿಯೊಡನೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

( ಬಿ. ಶಿವಲಿಂಗಯ್ಯ )
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ, ಮೀನುಗಾರಿಕೆ ಮತ್ತು
ಅರಣ್ಯ ಇಲಾಖೆ.

ಇವರಿಗೆ,

(1) ಮಹಾ ಲೇಖಪಾಲರು, ಲೆಕ್ಕಪತ್ರ (ಆಡಿಟ್ 1 ಮತ್ತು 2 ಕರ್ನಾಟಕ, ಬೆಂಗಳೂರು).
(2) ನಿರ್ದೇಶಕರು, ಗಣಿ ಮತ್ತು ಭೂ ಗರ್ಭ ಇಲಾಖೆ, ಬೆಂಗಳೂರು.
(3) ನಿರ್ದೇಶಕರು, ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು.
(4) ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು, ಮೆ: ಮೈಸೂರು ಖನಿಜ ಪರಿಮಿತ, ಬೆಂಗಳೂರು.
(5) ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.
(6) ಆರ್ಥಿಕ ಇಲಾಖೆ (ವೆಚ್ಚ-4).
(7) ಶಾಖಾ ರಕ್ಷಾ ಕಡತ.

ಎಚ್.ಎಮ್.:23:

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ-2
ಬಹು ಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ 29.7.2000

ಸಂ. ಪಸಂಮಿ:76:ಮಿಎಪಸ:96

## ಅನಧಿಕೃತ ಟಿಪ್ಪಣಿ

ವಿಷಯ: ಮೈಸೂರು ಮಿನರಲ್ಸ್ ಲಿಮಿಟೆಡ್, ಬೆಂಗಳೂರು ಇವರಿಗೆ ರಾಮಸಂದ್ರ — ಅಮೃತಮಹಲ್ ಕಾವಲಿನ 740.00 ಎಕರೆ ಜಮೀನನ್ನು ಗುತ್ತಿಗೆಗೆ ನೀಡಿರುವ ಬಗ್ಗೆ.

ಉಲ್ಲೇಖ: ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ ಸಿ.ಐ.:76:ಎಂ ಎಂ ಎಂ :98 ದಿನಾಂಕ 17.12.99.

— — — —

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದಲ್ಲಿ ಹೇಳಿರುವ ಅನಧಿಕೃತ ಟಿಪ್ಪಣಿಗೆ ಗಮನ ಸೆಳೆದಿದೆ. ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯು ಈ ಪ್ರಸ್ತಾವನೆಯನ್ನು ಪರಿಶೀಲಿಸಿದೆ. ~~ಪಶುಪಾಲನಾ ಮತ್ತು ಪಶುವೈದ್ಯ ಸೇವಾ~~ ಇಲಾಖೆಯ ಅಧೀನದಲ್ಲಿರುವ ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕು, ರಾಮಸಂದ್ರ, ಅಮೃತ ಮಹಲ್ ಕಾವಲಿನ ತಗಡೂರು ಮತ್ತು ಚಿಕ್ಕೋನಹಳ್ಳಿಯ ಸರ್ವೆ ನಂ. 1 ರಲ್ಲಿನ 740.00 ಎಕರೆ (ಏಳುನೂರ ನಲ್ವತ್ತು ಎಕರೆಗಳು ಮಾತ್ರ) ಜಮೀನನ್ನು 1999 — 2000 ರ ವರೆಗೆ ಪ್ರತಿ ವರ್ಷಕ್ಕೆ ರೂ. 5.00 ಲಕ್ಷ, 2001—2005 ರ ವರೆಗೆ ಪ್ರತಿ ವರ್ಷಕ್ಕೆ ರೂ. 7.50 ಲಕ್ಷ ಹಾಗೂ 2006—2020 ರ ವರೆಗೆ ಪ್ರತಿ ವರ್ಷಕ್ಕೆ 10.00 ಲಕ್ಷಗಳಂತೆ (20 ವರ್ಷಗಳ ಅವಧಿಗೆ) ಕೆಳಗೆ ಸೂಚಿಸಿರುವ ಷರತ್ತುಗಳಿಗೊಳಪಟ್ಟು ಮೆ: ಮೈಸೂರು ಮಿನರಲ್ಸ್ ಲಿಮಿಟೆಡ್, ಬೆಂಗಳೂರು ಇವರಿಗೆ ಕ್ವಾರೀಮೈಟ್ ಗಣಿಗಾಗಿ ಗುತ್ತಿಗೆ ಕೊಡಲು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ ಈ ಮೂಲಕ ತಿಳಿಸಿದೆ.

1. ಮೆ. ಮೈಸೂರು ಮಿನರಲ್ಸ್ ಲಿಮಿಟೆಡ್, ಬೆಂಗಳೂರು ಇವರು ಕಾವಲು ಪ್ರದೇಶವನ್ನು ಬಗರ್ ಹುಕುಂ ಸಾಗುವಳಿ ಮುಂತಾದುದಕ್ಕೆ ಅವಕಾಶ ಮಾಡದಂತೆ ಕಾಪಾಡಿಕೊಳ್ಳತಕ್ಕದ್ದು,

2. ಮೆ. ಮೈಸೂರು ಮಿನರಲ್ಸ್ ಲಿಮಿಟೆಡ್, ಬೆಂಗಳೂರು ಇವರು ತಮ್ಮ ಸ್ವಂತ ವೆಚ್ಚದಲ್ಲಿ ಕಾವಲು ಜಮೀನನ್ನು ಅಳತೆ ಮಾಡಿಸಿ ಬಾಂಡರಿಯನ್ನು (ಚಕಬಂದಿ ನಿಗದಿಮಾಡಿಸತಕ್ಕದ್ದು),

3. ಗುತ್ತಿಗೆ ಅವಧಿ ಮುಗಿದ ಕೂಡಲೇ ಕಾವಲಿನಲ್ಲಿರುವ ಕಾಯಂ ಅಥವಾ ಅಂಗಾಮಿಯಾಗಿರುವ ಯಾವುದೇ ನಿರ್ಮಿತ ವ್ಯವಸ್ಥೆಗಳು ಪಶುಸಂಗೋಪನಾ ಇಲಾಖೆಯ ಸ್ವತ್ತಾಗುತ್ತದೆ.

4. ನಿಗದಿಪಡಿಸಿದ ಗುತ್ತಿಗೆ ಹಣವನ್ನು ಪ್ರತಿ ವರ್ಷವೂ ಮುಂಚಿತವಾಗಿ ಪಾವತಿ ಮಾಡತಕ್ಕದ್ದು.

ಸಹಿ

(ಎಂ ಸಿ ಚಂದ್ರಕುಮಾರಿ)
ಸರ್ಕಾರದ ಉಪಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ

ಗೆ,
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಗಣಿ)
ಬಹುಮಹಡಿ ಕಟ್ಟಡ —
ಬೆಂಗಳೂರು.

: ೭ ನಕಲು :

seen
17.08.01

OS ML Section

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ, ಬೆಂಗಳೂರು

ಸಂಖ್ಯೆ : ಸಿಐ.76:ಎಂಎಂಎಂ.98

ದಿನಾಂಕ 05-09-2001

ಇಂದ,

ಕಾರ್ಯದರ್ಶಿ (ಗಣಿ, ಸಕ್ಕರೆ ಮತ್ತು ಜವಳಿ)
ಕರ್ನಾಟಕ ಸರ್ಕಾರ, ಬೆಂಗಳೂರು – ೫೬೦ ೦೦೧

MYSORE MINERALS LIMITED
M D SECTION
NO.
10 SEP 2001
BANGALORE-560001

ಗೆ,

ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು
ಮೈಸೂರು ಮಿನರಲ್ಸ್ ಲಿಮಿಟೆಡ್
ನಂ.39, ಮಹಾತ್ಮಗಾಂಧಿ ರಸ್ತೆ
ಬೆಂಗಳೂರು. 560 001.

ಮಾನ್ಯರೆ,

ವಿಷಯ: ಮೆ: ಮೈಸೂರು ಮಿನರಲ್ಸ್ ಲಿಮಿಟೆಡ್, ಬೆಂಗಳೂರು ಇವರಿಗೆ ರಾಯಸಮುದ್ರ ಅಮೃತಮಹಲ್ ಕಾವಲಿನ 740 ಎಕರೆ ಪ್ರದೇಶದ ಜಮೀನನ್ನು ಗುತ್ತಿಗೆಗೆ ನೀಡಿರುವ ಬಗ್ಗೆ.

ಉಲ್ಲೇಖ: ದಿನಾಂಕ: 05-02-2001ರ ಸಮಸಂಖ್ಯೆಯ ಸರ್ಕಾರಿ ಪತ್ರ.

::-::

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಿಂದ ತಮ್ಮ ಅಧೀನದಲ್ಲಿರುವ ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕು, ರಾಯಸಮುದ್ರ ಅಮೃತಮಹಲ್ ಕಾವಲಿನ ತಗಡೂರು ಮತ್ತು ಚಿಕ್ಕನಹಳ್ಳಿಯ ಸರ್ವೆ ನಂಬರ್-1ರಲ್ಲಿನ 740-00 ಎಕರೆ ಜಮೀನನ್ನು 1999-2000ರವರೆಗೆ ಪ್ರತಿ ವರ್ಷಕ್ಕೆ ರೂ.5.00 ಲಕ್ಷ, 2001-2005ರವರೆಗೆ ಪ್ರತಿ ವರ್ಷ ರೂ.7.50 ಲಕ್ಷ ಹಾಗೂ 2006-2020ರವರೆಗೆ ಪ್ರತಿ ವರ್ಷ 10.00 ಲಕ್ಷಗಳಂತೆ (20 ವರ್ಷಗಳ ಅವಧಿಗೆ) ಕೆಳಗೆ ಸೂಚಿಸಿರುವ ಷರತ್ತುಗಳಿಗೊಳಪಟ್ಟು ಮೆ: ಮೈಸೂರು ಮಿನರಲ್ಸ್ ಲಿಮಿಟೆಡ್, ಬೆಂಗಳೂರು ಇವರಿಗೆ ಕ್ಯಾಪ್ಟಿವ್ ಗಣಿಗಾರಿಕೆಗಾಗಿ ಗುತ್ತಿಗೆಗೆ ಕೊಡಲು ತಮ್ಮ ಒಪ್ಪಿಗೆಯನ್ನು ತಿಳಿಸಿರುತ್ತದೆ:-

1. ಮೆ: ಮೈಸೂರು ಮಿನರಲ್ಸ್ ಲಿಮಿಟೆಡ್, ಬೆಂಗಳೂರು ಇವರು ಕಾವಲು ಪ್ರದೇಶವನ್ನು ಬಗರ್-ಹುಕುಂ ಸಾಗುವಳಿ ಮುಂತಾದವುಗಳಿಗೆ ಅವಕಾಶ ಮಾಡದಂತೆ ಕಾಪಾಡಿ ಕೊಳ್ಳತಕ್ಕದ್ದು.

2. ಮೆ: ಮೈಸೂರು ಮಿನರಲ್ಸ್ ಲಿಮಿಟೆಡ್, ಬೆಂಗಳೂರು, ಇವರು ತಮ್ಮ ಸ್ವಂತ ವೆಚ್ಚದಲ್ಲಿ ಕಾವಲು ಜಮೀನನ್ನು ಅಳತೆ ಮಾಡಿಸಿ ಬೌಂಡರಿಯನ್ನು (ಹದ್ದುಬಂದಿ) ನಿಗದಿಪಡಿಸತಕ್ಕದ್ದು.

3. ಗುತ್ತಿಗೆ ಅವಧಿ ಮುಗಿದ ನಂತರ ಕಾವಲಿನಲ್ಲಿರುವ ಬಾವಿಯು ಅಥವಾ ಕಟ್ಟಡವು ರಚನೆಯಾಗಿರುವ ಯಾವುದೇ ನಿರ್ಮಿತ ವ್ಯವಸ್ಥೆಗಳು ಪಶುಸಂಗೋಪನಾ ಇಲಾಖೆಯ ಸ್ವತ್ತಾಗುತ್ತದೆ.

4. ನಿಗದಿಪಡಿಸಿದ ಗುತ್ತಿಗೆ ಹಣವನ್ನು ಪ್ರತಿ ವರ್ಷವೂ ಮುಂಗಡವಾಗಿ ಪಾವತಿ ಮಾಡತಕ್ಕದ್ದು.

... (2)

ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಒಪ್ಪಿಗೆಯ ಮೇರೆಗೆ ಗುತ್ತಿಗೆ ಪಡೆಯುವ ಬಗ್ಗೆ ತಮ್ಮ ನಿರ್ದಿಷ್ಟ ಅಭಿಪ್ರಾಯವನ್ನು ನೀಡಬೇಕೆಂದು ತಮ್ಮನ್ನು ಕೋರಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಎಂ. ವೆಂಕಟರಸಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ (ಗಣಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.